ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp.19-24
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಅಪರಾಧದ ಪುನರಾವರ್ತನೆಯ ತಡೆಗಟ್ಟುವಿಕೆ ಮತ್ತು ಸಮಾಜಕಾರ್ಯದ ಮಧ್ಯಸ್ಥಿಕೆ

**ಡಾ. ಪ್ರಶಾಂತ ಹೆಚ್.ವೈ**
ಸಹಾಯಕ ಪ್ರಾಧ್ಯಾಪಕರು, ಸಮಾಜಕಾರ್ಯ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆ ನಗರ, ಧಾರವಾಡ

***Abstract:***
*ಪ್ರಸ್ತುತ ದಿನಮಾನಗಳಲ್ಲಿ ಅಪರಾಧದ ಪುನರಾವರ್ತನೆ ಅಪರಾಧ ನ್ಯಾಯ ವ್ಯವಸ್ಥೆಗೆ ಬಹು ದೊಡ್ಡ ಸವಾಲಾಗಿ ಪರಿಣಮಿಸಿದೆ. ಅಪರಾಧಿಗಳು ಕಾರಾಗೃಹಗಳಲ್ಲಿ ಅನೇಕ ಸುಧಾರಣಾ ಕ್ರಮಗಳ ನಡುವೆಯೂ ಕಾರಾಗೃಹಗಳಿಂದ ಬಿಡುಗಡೆಯಾದ ನಂತರ ಪುನಃ ಅಪರಾಧ ಪ್ರಕರಣಗಳಲ್ಲಿ ತೊಡಗಿಸಿಕೊಳ್ಳುವುದು ರಾಷ್ಟ್ರೀಯ ಅಪರಾಧಗಳ ದಾಖಲೆ ಬ್ಯೂರೋ (ಎನ್.ಸಿ.ಆರ್.ಬಿ) ಅಂಕಿ-ಅಂಶಗಳಿಂದ ಸಾಬೀತಾಗುತ್ತಿದೆ. ಅಪರಾಧದ ಪುನರಾವರ್ತನೆಯ ತಡೆಗಟ್ಟುವಿಕೆ ಅಥವಾ ಮರು ಅಪರಾಧಗಳನ್ನು ತಗ್ಗಿಸುವಲ್ಲಿ ಸಮಾಜಕಾರ್ಯದ ಮಧ್ಯಸ್ಥಿಕೆಯ ಪಾತ್ರ ಮತ್ತು ಮಹತ್ವವನ್ನು ವಿಶ್ಲೇಷಿಸುವ ಪ್ರಯತ್ನವನ್ನು ಈ ಸಂಶೋಧನಾ ಪತ್ರಿಕೆ ಮಾಡಿದೆ. ಅಪರಾಧದ ಪುನರಾವರ್ತನೆಗಿರುವ ಕಾರಣಗಳನ್ನು ವೈಜ್ಞಾನಿಕವಾಗಿ ಅಧ್ಯಯನ ನಡೆಸಿ ಅವುಗಳನ್ನು ಪಟ್ಟಿಮಾಡಲಾಗಿದೆ. ಬಿಡುಗಡೆಯ ನಂತರದ ಆರೈಕೆ ಮತ್ತು ಪುನರ್ವಸತಿಗೆ ಸಂಬಂಧಿಸಿದಂತೆ ಸಮಾಜಕಾರ್ಯದ ಅನ್ವಯಿಕೆ ಮತ್ತು ಆಚರಣೆಯ ವ್ಯಾಪ್ತಿಯ ಬಗ್ಗೆಯೂ ಈ ಲೇಖನ ಬೆಳಕು ಚೆಲ್ಲುತ್ತದೆ.*

***Keywords:*** *ಅಪರಾಧದ ಪುನರಾವರ್ತನೆ, ಸಮಾಜಕಾರ್ಯ, ಮರು ಅಪರಾಧ, ಪುನರ್ವಸತಿ..*

## ಪೀಠಿಕೆ

ಅಪರಾಧ ನ್ಯಾಯಶಾಸ್ತ್ರದಲ್ಲಿ ಪುನರಾವರ್ತನೆಯು ಅತ್ಯಂತ ಮೂಲಭೂತ ಪರಿಕಲ್ಪನೆಗಳಲ್ಲಿ ಒಂದಾಗಿದೆ. ಇದು ವ್ಯಕ್ತಿಯೊಬ್ಬ ಈಗಾಗಲೇ ಅಪರಾಧ ಎಸಗಿ, ಆ ಅಪರಾಧಕ್ಕೆಶಿಕ್ಷೆಯನ್ನೂ ಅನುಭವಿಸಿ, ಕಾರಾಗೃಹದಿಂದ ಹೊರಬಂದ ನಂತರ ಮತ್ತೆ ಅದೇ ಅಪರಾಧ ನಡವಳಿಕೆಗೆ ವ್ಯಕ್ತಿಯ ಮರುಕಳಿಸುವಿಕೆಯನ್ನು ಸೂಚಿಸುತ್ತದೆ. ಶಿಕ್ಷೆಯನ್ನು ಪಡೆದ ನಂತರವೂ ಮತ್ತೆ-ಮತ್ತೆ ಅಪರಾಧ ಮಾಡಲು ಅಭ್ಯಾಸಿತನಾಗಿರುವ ವ್ಯಕ್ತಿಯು ಅಪರಾಧ ನಡವಳಿಕೆಗೆ ಹಿಂತಿರುಗುತ್ತಾನೆ. ಮೆರಿಯಮ್ **ವೆಬ್‌ಸ್ಟರ್ ನಿಘಂಟು ಪ್ರಕಾರ** *'ಹಿಂದಿನ ಅಪರಾಧಿ ಸ್ಥಿತಿ ಅಥವಾ ಅಪರಾಧ ನಡವಳಿಕೆಗೆ ಮರುಕಳಿಸುವ ಪ್ರವೃತ್ತಿಯು ಪುನರಾವರ್ತನೆಯಾಗಿರುತ್ತದೆ'* ಎಂದು ಹೇಳಿದ್ದಾರೆ. **ಭಾರತದ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ** ಪ್ರಕಾರ *ಈ ಹಿಂದಿನ ಪ್ರಕರಣಗಳಲ್ಲಿ ಅಪರಾಧಿ ಎಂದು ಸಾಬೀತಾಗಿ, ಶಿಕ್ಷೆಗೆ ಒಳಪಟ್ಟು ನಂತರ ಮತ್ತೆ-ಮತ್ತೆ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗುವ ವ್ಯಕ್ತಿಯನ್ನು ಪುನರಾವರ್ತಿತ ವ್ಯಕ್ತಿ(Recidivist)'* ಎಂದು *ಪರಿಗಣಿಸಲಾಗುತ್ತದೆ.* **ಇಂಡಿಯನ್ ಡಿಪಾರ್ಟ್‌ಮೆಂಟ್ ಆಫ್ ಕರೆಕ್ಷನ್** ಪ್ರಕಾರ *'ರಾಜ್ಯ ತಿದ್ದುಪಡಿ ಸಂಸ್ಥೆಗಳಿಂದ ಬಿಡುಗಡೆ ಹೊಂದಿದ ದಿನಾಂಕದಿಂದ ಮೂರು ವರ್ಷಗಳೊಳಗೆ ಸೆರೆವಾಸಕ್ಕೆ*

***Please cite this article as:*** ಪ್ರಶಾಂತ ಹೆಚ್.ವೈ. (2024). ಅಪರಾಧದ ಪುನರಾವರ್ತನೆಯ ತಡೆಗಟ್ಟುವಿಕೆ ಮತ್ತು ಸಮಾಜಕಾರ್ಯದ ಮಧ್ಯಸ್ಥಿಕೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 3(4), 19–24

*ಮರಳುವುದನ್ನು ಅಪರಾಧಿಯ ಪುನರಾವರ್ತನೆ'* ಎಂದು ವ್ಯಾಖ್ಯಾನಿಸಿದೆ.

ಅಪರಾಧಿಯೊಬ್ಬ ತನ್ನ ಹಿಂದಿನ ಶಿಕ್ಷೆಯ ಅಂತ್ಯ ಮತ್ತು ಜೈಲಿನಿಂದ ಬಿಡುಗಡೆಯಾದ ಮೂರು ವರ್ಷಗಳ ಅವಧಿಯೊಳಗೆ ಮರುಬಂಧನ (Re-arrest), ಮರು ಅಪರಾಧಿ (Re-conviction) ಯೆಂದು ಸಾಬೀತಾಗುವುದು ಮತ್ತು ಮರುಶಿಕ್ಷೆ (Re-sentencing)ಗೆ ಗುರಿಯಾಗುವುದನ್ನು ಆಧಾರವಾಗಿಟ್ಟುಕೊಂಡು ಪುನರಾವರ್ತನೆಯನ್ನು ಅಪರಾಧ ನ್ಯಾಯಶಾಸ್ತ್ರದಲ್ಲಿ ಅಳೆಯಲಾಗುತ್ತದೆ.

**ಪುನರಾವರ್ತನೆ ಅಥವಾ ಮರು ಅಪರಾಧದ ಗುಣಲಕ್ಷಣಗಳು**

ಝ್ಗೋಬಾ ಮತ್ತು ಸಲೆರ್ನೊರವರ ಪ್ರಕಾರ ಪುನರಾವರ್ತನೆ ಅಪರಾಧಿಗಳು; ಮೇಲಿಂದ ಮೇಲೆ ಅಪರಾಧ ಎಸಗುವುದು, ಈಗಾಗಲೇ ಕೆಲವು ಅಪರಾಧಕ್ಕಾಗಿ ಶಿಕ್ಷೆಗೊಳಗಾದವರು ಅಪರಾಧಗಳನ್ನು ಪುನರಾವರ್ತಿಸುವುದು, ಇತರ ದಿನನಿತ್ಯದ ಚಟುವಟಿಕೆಗಳಂತೆ ಅಪರಾಧ ಎಸಗುವುದನ್ನೂ ಒಂದು ಚಟುವಟಿಕೆಯನ್ನಾಗಿಸಿಕೊಂಡಿರುವುದು, ಪುನರಾವರ್ತಿತ ಅಪರಾಧಿಗಳಿಗೆ ಕಾನೂನು ಅಥವಾ ಸಮಾಜದ ಅಂಜಿಕೆ ಅಥವಾ ಭಯಗಳಿಲ್ಲದಿರುವುದು, ಶಿಕ್ಷಾ ಸುಧಾರಣಾ ಸಿದ್ಧಾಂತ ಪುನರಾವರ್ತಿತ ಅಪರಾಧಿಗಳ ವಿಷಯದಲ್ಲಿ ಸಂಪೂರ್ಣ ವಿಫಲವಾಗಿರುವುದು ಹಾಗೂ ಅಪರಾಧಿಯ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯದೊಂದಿಗೆ ಪುನರಾವರ್ತನೆಯು ಯಾವುದೇ ಸಂಬಂಧ ಹೊಂದಿರುವುದಿಲ್ಲದಿರುವುದು ಮುಂತಾದ ಲಕ್ಷಣಗಳನ್ನು ಹೊಂದಿರುತ್ತಾರೆ.

ಪುನರಾವರ್ತಿತ ಅಪರಾಧಿಗಳು ಅಪರಾಧ ನ್ಯಾಯ ವ್ಯವಸ್ಥೆಗೆ ಮತ್ತು ಕಾರಾಗೃಹ ಆಡಳಿತಕ್ಕೆ ಗಂಭೀರ ಸವಾಲನ್ನು ಒಡ್ಡುತ್ತಾರೆ. ಏಕೆಂದರೆ, ಪುನರಾವರ್ತನೆಯು ಸಾಮಾನ್ಯವಾಗಿ ತಿದ್ದುಪಡಿ ನ್ಯಾಯ ಅಥವಾ ಸುಧಾರಣಾ ಕಾನೂನುಗಳ ವೈಫಲ್ಯವಾಗಿ ಪರಿಗಣಿಸಲ್ಪಡುತ್ತದೆ.

**ಅಪರಾಧದ ಪುನರಾವರ್ತನೆಗೆ ಕಾರಣಗಳು**

ವ್ಯಕ್ತಿಯೊಬ್ಬ ಈಗಾಗಲೇ ಅಪರಾಧ ಮಾಡಿ, ಶಿಕ್ಷೆ ಅನುಭವಿಸಿ ಪುನಃ ಅಪರಾಧದ ಜೀವನಕ್ಕೆ ಏಕೆ ಮರಳುತ್ತಾನೆ? ಎಂಬ ಪ್ರಶ್ನೆಗೆ ನಿಖರ ಉತ್ತರವಿಲ್ಲ. ಅಪರಾಧಿಯ ಹಿನ್ನೆಲೆ, ಅವನ ಮಾನಸಿಕತೆ, ಸಾಮಾಜಿಕ ಸನ್ನಿವೇಶಗಳನ್ನೂ ಒಳಗೊಂಡಂತೆ ಅನೇಕ ಕಾರಣಗಳಿಂದ ಅವನು ಪದೇ–ಪದೇ ಅಪರಾಧ ಕೃತ್ಯಗಳಲ್ಲಿ ಭಾಗವಹಿಸುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಅನೇಕ ಅಪರಾಧಶಾಸ್ತ್ರಜ್ಞರ ಪ್ರಕಾರ ಏಕ ಅಂಶಗಳಿಗಿಂತ ಬಹು ಅಂಶಗಳು ಪುನರಾವರ್ತನೆ ಅಥವಾ ಮರು ಅಪರಾಧ ಪ್ರವೃತ್ತಿಗೆ ಕಾರಣವಾಗುತ್ತವೆ. ಅವುಗಳೆಂದರೆ, ಸೂಕ್ತ ಸಾಮಾಜೀಕರಣದ ಕೊರತೆ,ಸಮಾಜ ವಿರೋಧಿ ವರ್ತನೆಗಳು, ಇತರ ಅಪರಾಧಿಗಳೊಂದಿಗೆ ಹಾಗೂ ಸಹವರ್ತಿಗಳೊಂದಿಗಿನ ನಿಕಟ ಸಹವಾಸ, ಹಠಾತ್ ಆವೇಗಗಳು ಮತ್ತು ಚಡಪಡಿಕೆ, ಉದ್ಯೋಗ ತರಬೇತಿಯ ಕೊರತೆ, ಉದ್ಯೋಗ ಪಡೆಯಲು ಅಸಮರ್ಥತೆಮ, ಶಿಕ್ಷಣದ ಕೊರತೆ, ಮಾದಕ ವ್ಯಸನ ವಸ್ತುಗಳ ಪ್ರಭಾವ, ಕುಟುಂಬದ ಸದಸ್ಯರು ಮತ್ತು ಸಂಗಾತಿಗಳ ಬೆಂಬಲದ ಕೊರತೆ, ಕಾರಾಗೃಹದಿಂದ ಮರಳಿದ ನಂತರ ಸಮಾಜದಲ್ಲಿ ಮರು ಸೇರ್ಪಡೆಗೊಳ್ಳಲು ಎದುರಾಗುವ ಅಡ್ಡಿ–ಆತಂಕಗಳು, ಅಪರಾಧಿಗಳ ಮೇಲಿರುವ ಸಾಮಾಜಿಕ ಕಳಂಕ ಮತ್ತು ತಾರತಮ್ಯತೆ, ಸೂಕ್ತ ಪರಿಣಾಮಕಾರಿ ಪುನರ್ವಸತಿ ಕಾರ್ಯಕ್ರಮಗಳ ಕೊರತೆ, ಸಮಾಜದಿಂದ ಖೈದಿಗಳ ನಿರಂತರ ಪ್ರತ್ಯೇಕತೆ, ಸುಧಾರಣಾ ತಂತ್ರಗಳು ಮತ್ತು ವಿಧಾನಗಳ ಅಸಮರ್ಪಕತೆ, ಅನುಚಿತ ಮತ್ತು ಕಠಿಣವಲ್ಲದ ಶಿಕ್ಷಾ ಕ್ರಮಗಳು, ಮತ್ತು ದೋಷಪೂರಿತ ಸುಧಾರಣಾ ಮತ್ತು ಪುನರ್ವಸತಿ ಯೋಜನೆಗಳು ಹೀಗೆ ಅನೇಕ ಅಂಶಗಳು ಕಾರಣವಾಗುತ್ತವೆ.

ಕಾರಾಗೃಹದಿಂದ ಬಿಡುಗಡೆ ಹೊಂದಿದ ಹೆಚ್ಚಿನ ಅಪರಾಧಿಗಳು ಗಮನಾರ್ಹವಾದ ಸಾಮಾಜಿಕ

ಹೊಂದಾಣಿಕೆಯ ಸಮಸ್ಯೆಗಳನ್ನು ಎದುರಿಸುತ್ತಾರೆ. ಶಿಕ್ಷೆ ಅನುಭವಿಸಿ ಹೊರಬಂದು ಹೊಸ ಜೀವನ ಕಟ್ಟಿಕೊಳ್ಳುವ ಮನಸ್ಸು ಮಾಡಿದ ಮಾಜಿ ಅಪರಾಧಿಗಳನ್ನು ಅಷ್ಟು ಸುಲಭವಾಗಿ ಸಮಾಜ ಮುಕ್ತ ಮನಸ್ಸಿನಿಂದ ಸ್ವೀಕರಿಸುವುದಿಲ್ಲ. ಕುಟುಂಬದ ತಿರಸ್ಕಾರ, ಸಾಮಾಜಿಕ ಕಳಂಕ ಮತ್ತು ಬಹಿಷ್ಕಾರ, ಉದ್ಯೋಗ ಮತ್ತು ವಸತಿಗಳ ನಿರಾಕರಣೆ, ಔಪಚಾರಿಕ ಶಿಕ್ಷಣಕ್ಕೆ ಮರಳಲು ಸಾಧ್ಯವಾಗದಿರುವುದು, ಅಪರಾಧಿ ಎಂಬ ಮುದ್ರೆ ತೊಡೆದು ಹಾಕಲು ವಿಫಲಗೊಳ್ಳುವುದು ಇವೇ ಮೊದಲಾದ ನಕಾರಾತ್ಮಕ ಪರಿಣಾಮಗಳು ಪುನರಾವರ್ತನೆಯ ಮಾರ್ಗ ತುಳಿಯುವಂತೆ ಒತ್ತಡ ಹೇರುತ್ತವೆ. ಈ ಸಮಸ್ಯೆಗಳನ್ನು ಎದುರಿಸಲು ಸರ್ಕಾರದ, ಕಾರಾಗೃಹ ಆಡಳಿತದ, ಸಮುದಾಯದ, ಕುಟುಂಬದ ಸಹಾಯ ಪಡೆಯದ ಹೊರತು ಅಪರಾಧಿಗಳು ವಿಫಲವಾದ ಸಾಮಾಜಿಕ ಏಕೀಕರಣ, ಮರು ಅಪರಾಧ, ಮರು ಶಿಕ್ಷೆ ಮತ್ತು ಸಾಮಾಜಿಕ ನಿರಾಕರಣೆಯಂತಹ ಚಕ್ರದಲ್ಲಿ ಸಿಲುಕಿಕೊಳ್ಳುವ ಅಪಾಯವಿರುತ್ತದೆ.

**ಪುನರಾರ್ವತನೆ ಅಥವಾ ಮರು ಅಪರಾಧದ ಅಂಕಿ–ಅಂಶಗಳು**

ರಾಷ್ಟ್ರೀಯ ಅಪರಾಧಗಳ ದಾಖಲೆ ಬ್ಯೂರೋ (ಎನ್.ಸಿ.ಆರ್.ಬಿ) ಪ್ರತಿವರ್ಷ ದೇಶದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ವರದಿಯಾಗುವ ಪುನರಾವರ್ತಿತ ಅಪರಾಧ ಪ್ರಕರಣಗಳ ಅಂಕಿ–ಅಂಶಗಳ ವಾರ್ಷಿಕ ವರದಿಯನ್ನು ಪ್ರಕಟಿಸುತ್ತದೆ. ಭಾರತೀಯ ದಂಡ ಸಂಹಿತೆ(ಐ.ಪಿ.ಸಿ) ಮತ್ತು ವಿಶೇಷ ಹಾಗೂ ಸ್ಥಳೀಯ ಕಾನೂನುಗಳ (ಎಸ್.ಎಸ್.ಎಲ್) ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ದಾಖಲಾದ ಪುನರಾವರ್ತಿತ ಅಪರಾಧ ಪ್ರಕರಣಗಳ ಸ್ಥೂಲ ಮಾಹಿತಿಗಳನ್ನು ಈ ವರದಿ ಒಳಗೊಂಡಿರುತ್ತದೆ.

**ಕೋಷ್ಟಕ 1: ಪುನರಾವರ್ತಿತ ಅಪರಾಧಗಳ ರಾಷ್ಟ್ರೀಯ ಸರಾಸರಿ (ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನೂ ಒಳಗೊಂಡಂತೆ)**

| ವರ್ಷ | ಭಾರತೀಯ ದಂಡ ಸಂಹಿತೆ(ಐ.ಪಿ.ಸಿ) ಅಡಿಯಲ್ಲಿ | ವಿಶೇಷ ಹಾಗೂ ಸ್ಥಳೀಯ ಕಾನೂನುಗಳ (ಎಸ್.ಎಸ್.ಎಲ್) ಅಡಿಯಲ್ಲಿ |
|---|---|---|
| 2017 | 5.6% | 6.3% |
| 2018 | 5.0% | 5.8% |
| 2019 | 4.8% | 6.3% |
| 2020 | 4.8% | 5.0% |
| 2021 | 6.0% | 6.3% |
| 2022 | 7.1% | 8.6% |

**ಮೂಲ:** ರಾಷ್ಟ್ರೀಯ ಅಪರಾಧಗಳ ದಾಖಲೆ ಬ್ಯೂರೋ ಎನ್.ಸಿ.ಆರ್.ಬಿ)

2022ನೇ ಸಾಲಿನ ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ದಾಖಲಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಬಂಧಿತರಾದ ವ್ಯಕ್ತಿಗಳಲ್ಲಿ ಅತೀ ಹೆಚ್ಚು ಶೇಕಡವಾರು ಪುನರಾವರ್ತಿತ ಪ್ರಕರಣಗಳಲ್ಲಿ ಭಾಗಿಗಳಾದ ಅಪರಾಧಿಗಳನ್ನು ಹೊಂದಿರುವ ರಾಜ್ಯಗಳೆಂದರೆ, ಬಿಹಾರ (22.1%), ಅಸ್ಸಾಂ (16.9%), ಮಿಜೊರಾಂ (13.5%), ಜಾರ್ಖಂಡ್ (12.8%), ದೆಹಲಿ (12.7%), ಹಿಮಾಚಲ ಪ್ರದೇಶ (12.3%), ಕರ್ನಾಟಕ (ಶೇ.1.6%).

2022ನೇ ಸಾಲಿನಲ್ಲಿ ವಿಶೇಷ ಹಾಗೂ ಸ್ಥಳೀಯ ಕಾನೂನುಗಳ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ದಾಖಲಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಬಂಧಿತರಾದ ವ್ಯಕ್ತಿಗಳಲ್ಲಿ ಅತೀ ಹೆಚ್ಚು ಶೇಕಡಾವಾರು ಪುನರಾವರ್ತಿತ ಅಪರಾಧಿಗಳನ್ನು ಹೊಂದಿರುವ ರಾಜ್ಯಗಳೆಂದರೆ, ಬಿಹಾರ (17.6%), ದೆಹಲಿ (16.4%), ಜಾರ್ಖಂಡ್(16.3%), ತಮಿಳುನಾಡು

(15.3%), ಹಿಮಾಚಲ ಪ್ರದೇಶ (14.1%), ಕರ್ನಾಟಕ(1.9%).

## ಪುನರಾರ್ವತನೆಯ ತಡೆಗಟ್ಟುವಿಕೆ ಮತ್ತು ಸಮಾಜಕಾರ್ಯದ ಮಧ್ಯಸ್ಥಿಕೆ

## (Prevention of Recidivism and Social Work Intervention)

ಪರಾಧಿಗಳಲ್ಲಿ ಸಮಸ್ಯಾತ್ಮಕ ಸಾಮಾಜಿಕ ಸಂದರ್ಭಗಳು ಹೆಚ್ಚಾದಾಗ ಪುನರಾರ್ವತನೆಯ ಅಪಾಯ ಸಾಂದರ್ಭಿಕವಾಗಿ ಹೊರಬರಬಹುದು. ಈ ರೀತಿಯ ಒತ್ತಡದಿಂದ ಉಂಟಾಗಬಹುದಾದ ಪುನರಾರ್ವತನೆಯನ್ನು ತಡೆಗಟ್ಟಲು ಅಪರಾಧಿಗಳನ್ನು ಅಪಾಯಕ್ಕೆ ಸಿಲುಕಿಸುವ ಅಂಶಗಳ ತಿಳುವಳಿಕೆಯ ಆಧಾರದ ಮೇಲೆ ಪರಿಣಾಮಕಾರಿ ಸಮಾಜಕಾರ್ಯ ಮಧ್ಯಸ್ಥಿಕೆಗಳ ಅಗತ್ಯವಿದೆ. ಯುವ ಅಪರಾಧಿಗಳು, ಪುನರಾವರ್ತಿತ ಅಪರಾಧಿಗಳು, ಮಾದಕ ದ್ರವ್ಯವ್ಯಸನಿಗಳು, ಮಾನಸಿಕ ಅಸ್ವಸ್ಥ ಅಪರಾಧಿಗಳು, ಲೈಂಗಿಕ ಅಪರಾಧಿಗಳಂತಹ ನಿರ್ದಿಷ್ಟ ವರ್ಗಗಳ ಅಪರಾಧಿಗಳೊಂದಿಗೆ ವ್ಯವಹರಿಸಲು ಸಮಾಜಕಾರ್ಯ ವಿವಿಧ ಮಾರ್ಗೋಪಾಯಗಳನ್ನು ಅನುಸರಿಸುತ್ತದೆ. ಹೆಚ್ಚಿನ ಅಪರಾಧಿಗಳು ಸಾಮಾಜಿಕ, ಆರ್ಥಿಕ ಮತ್ತು ವೈಯಕ್ತಿಕ ಸವಾಲುಗಳನ್ನು ಎದುರಿಸುತ್ತಾರೆ. ಅದು ಅವರ ಸಾಮಾಜಿಕ ಏಕೀಕರಣಕ್ಕೆ ಅಡೆ–ತಡೆಗಳನ್ನು ಉಂಟುಮಾಡುತ್ತದೆ. ವ್ಯಕ್ತಿಗತ ಸಮಾಜಕಾರ್ಯ ವಿಧಾನದ ಅನ್ವಯಿಕೆಯು ಈ ತೊಡಕುಗಳನ್ನು ನಿವಾರಿಸುವಲ್ಲಿ ಪರಿಣಾಮಕಾರಿಯಾಗಿದೆ.

ಅಪರಾಧಿಯು ಪುನಃ ಅಪರಾಧ ಮಾಡುವ ಅಥವಾ ಅಪರಾಧದಿಂದ ದೂರವಿರುವ ಸಾಧ್ಯತೆಯ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶಗಳನ್ನು ಅಧ್ಯಯನಕ್ಕೊಳಪಡಿಸುವುದು ಮುಖ್ಯವೆನ್ನಿಸುತ್ತದೆ. ಕೌಟುಂಬಿಕ ಪರಿಸರ, ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆ, ಸಹವರ್ತಿಗಳ ಸಹವಾಸ, ಸಾಮಾಜಿಕ ಪ್ರತ್ಯೇಕತೆ ಮತ್ತು ಅಂಚಿನಲ್ಲಿರುವಿಕೆ, ದೈಹಿಕ ಮತ್ತು ಭಾವನಾತ್ಮಕ ನಿಂದನೆ, ಅನಕ್ಷರತೆ, ಕಡಿಮೆ ಶೈಕ್ಷಣಿಕ ಮತ್ತು ಕೌಶಲ್ಯ ಗುಣಮಟ್ಟ, ಕಳಪೆ ಉದ್ಯೋಗ ಅಥವಾ ನಿರುದ್ಯೋಗ, ಬಡತನ ಮತ್ತು ಹಸಿವು, ಅಪರಾಧ ಜೀವನ ಶೈಲಿ ಮತ್ತು ನಡವಳಿಕೆ, ಮಾದಕ ವ್ಯಸನ, ಮಾನಸಿಕ ಅಸಾಮರ್ಥ್ಯಗಳು, ಕಳಪೆ ಅರಿವಿನ ಅಥವಾ ಭಾವನಾತ್ಮಕ ಕಾರ್ಯನಿರ್ವಹಣೆ, ಹಣಕಾಸು ನಿರ್ವಹಣಾ ಕೌಶಲ್ಯಗಳ ಕೊರತೆ, ಪರಸ್ಪರ ಸಂಬಂಧಗಳನ್ನು ನಿಭಾಹಿಸುವಲ್ಲಿನ ವಿಫಲತೆ ಮತ್ತು ಸೆರೆವಾಸದ ಸಮಯದಲ್ಲಿನ ವರ್ತನೆ ಮೊದಲಾದ ಅಪಾಯಕಾರಿ ಅಂಶಗಳನ್ನು ಮರು ಅಪರಾಧದ ಸಂಭವನೀಯತೆಯನ್ನು ಹೆಚ್ಚಿಸುವ ಮತ್ತು ಅಪರಾಧಿಯು ಬಲಿಪಶು ಹಾಗೂ ಸಮುದಾಯಕ್ಕೆ ಮಾರಕವಾಗಬಹುದಾದ ಸಂಭಾವ್ಯ ಅಪಾಯವನ್ನು ಹೆಚ್ಚಿಸುವ ಪೂರ್ವ ಅಂಶಗಳೆಂದು ಗುರುತಿಸಲಾಗಿದೆ.

ಸಾಂಸ್ಥಿಕ ಮತ್ತು ಸಮುದಾಯ ಆಧಾರಿತ ಕಾರ್ಯಕ್ರಮಗಳ ಮೇಲೆ ಹೆಚ್ಚಿನ ಒತ್ತು ನೀಡಿ ಅಪರಾಧಿಗಳಲ್ಲಿ ಪ್ರೇರಣೆ, ಶಿಕ್ಷಣ, ಕೌಶಲ್ಯಗಳ ಅಭಿವೃದ್ಧಿ, ಉದ್ಯೋಗ, ವಸತಿ, ಪರಸ್ಪರ ಸಂಬಂಧಗಳ ನಿಭಾಹಿಸುವಿಕೆ, ಔಷಧ ಮತ್ತು ಚಿಕಿತ್ಸೆ, ಮಾನಸಿಕ ಆರೋಗ್ಯ ರಕ್ಷಣೆ, ಅರಿವಿನ ವರ್ತನೆಯ ಮಧ್ಯಸ್ಥಿಕೆಗಳನ್ನು ಸಮಾಜಕಾರ್ಯ ಅನ್ವಯಿಕೆಯ ಮೂಲಕ ನಿರ್ವಹಿಸಿದರೆ ಪುನರಾವರ್ತನೆಯ ಕ್ರಿಯಾತ್ಮಕ ಅಪಾಯದ ಅಂಶಗಳನ್ನು ಪರಿಹರಿಸಬಹುದಾಗಿದೆ.

ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಒಡಂಬಡಿಕೆಗಳು ಮತ್ತು ವಿಶ್ವಸಂಸ್ಥೆಯ ಅಪರಾಧ ತಡೆಗಟ್ಟುವಿಕೆ ಮತ್ತು ಅಪರಾಧ ನ್ಯಾಯ ಪ್ರಮಾಣಗಳು ಮತ್ತು ಮಾನದಂಡಗಳು ಅಪರಾಧಿಗಳ ಪುನರ್ವಸತಿ ಮತ್ತು ಸಮಾಜದಲ್ಲಿ ಅವರ ಯಶಸ್ವಿ ಸಾಮಾಜಿಕ ಮರುಸಂಘಟನೆಯು ಅಪರಾಧ ನ್ಯಾಯ ವ್ಯವಸ್ಥೆಗಳ ಮೂಲ ಧ್ಯೇಯವಾಗಿರಬೇಕೆಂಬುದನ್ನು ಸ್ಪಷ್ಟವಾಗಿ ಅಂಗೀಕರಿಸಿವೆ. ಆದರೂ ಕೂಡ ಅಪರಾಧಿಗಳ ಸಾಮಾಜಿಕ ಮರು ಸಂಘಟನೆಯ ವಿಫಲತೆಯು ಬಹು ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಅನೇಕ ಪುನರ್ವಸತಿ ಕಾರ್ಯಕ್ರಮಗಳ

ಮೂಲಕ ಅಪರಾಧಿಗಳ ಸುಧಾರಣೆಗೆ ಶ್ರಮವಹಿಸಿದರೂ ಕೂಡ ಭಾರತದಲ್ಲಿ ಪುನರಾವರ್ತನೆಯ ಅಪರಾಧಿಗಳ ಪ್ರಮಾಣ ಹೆಚ್ಚುತ್ತಲೇ ಇದೆ. ಮುಂದಿನ ಅಪರಾಧಗಳನ್ನು ತಡೆಗಟ್ಟುವ ಮತ್ತು ಸಮಾಜವನ್ನು ರೂಢಿಗತ ಅಪರಾಧಿಗಳಿಂದ ರಕ್ಷಿಸುವ ಸಾಧನವಾಗಿ ಅಪರಾಧಿಗಳ ಸಾಮಾಜಿಕ ಮರುಸಂಘಟನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಮಾಜಕಾರ್ಯ ಮಧ್ಯಸ್ಥಿಕೆಗಳ ಪ್ರಾಮುಖ್ಯತೆಯನ್ನು ಗಂಭೀರವಾಗಿ ಪರಿಗಣಿಸಬೇಕಿದೆ.

ಸಮಾಜಕಾರ್ಯ ಚಿಕಿತ್ಸಕ ತಂತ್ರೋಪಾಯಗಳನ್ನು ಅನುಸರಿಸಿ ಅಪರಾಧಿಯನ್ನು ಕಾನೂನು ಪಾಲಿಸುವ ನಡವಳಿಕೆಯನ್ನು ಅಳವಡಿಸಿಕೊಳ್ಳುವಂತೆ ಪ್ರೇರೇಪಿಸಲಾಗುತ್ತದೆ. ಆ ಮೂಲಕ ಅಪರಾಧಿಯೊಬ್ಬ ಸಾಮಾಜಿಕವಾಗಿ ರಚನಾತ್ಮಕ ಪಾತ್ರಗಳನ್ನು ನಿರ್ವಹಿಸುವಂತೆ ಕ್ರಮವಹಿಸುವುದು ಸಮಾಜಕಾರ್ಯ ಮಧ್ಯಸ್ಥಿಕೆಯ ಪ್ರಮುಖ ಉದ್ದೇಶವಾಗಿದೆ. ಸಮಾಜಕಾರ್ಯ ಅನ್ವಯಿಕೆಯ ಪ್ರಾಥಮಿಕ ಗುರಿ ಅಪರಾಧಿಗಳಿಗೆ ಅವರು ಅಪರಾಧದಿಂದ ದೂರವಿರಲು ಅಗತ್ಯವಿರುವ ಎಲ್ಲಾ ರೀತಿಯ ಸಹಾಯ ಮತ್ತು ಮೇಲ್ವಿಚಾರಣೆಯನ್ನು ಒದಗಿಸುವುದು. ಈ ಪ್ರಕ್ರಿಯೆಯಲ್ಲಿ ಸಮಾಜಕಾರ್ಯಕರ್ತರು ಸಮಾಜಕಾರ್ಯದ ವಿಧಾನಗಳು, ತಂತ್ರಗಳು, ಕೌಶಲ್ಯಗಳು ಮತ್ತು ಪರಿಹಾರೋಪಾಯಗಳನ್ನು ಸಮರ್ಥವಾಗಿ ಬಳಸಿಕೊಂಡು ಯಶಸ್ವಿಯಾಗಿ ಸಮುದಾಯಕ್ಕೆ ಮರು ಸಂಘಟಿಸಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಸುಲಭಗೊಳಿಸುತ್ತಾರೆ.

**ಉಪಸಂಹಾರ**

ಸಾಮಾನ್ಯವಾಗಿ ಅಪರಾಧಿಗಳ ಸಾಮಾಜಿಕ ಮರು ಸಂಘಟನೆಗೆ ಸಂಬಂಧಿಸಿದ ಕಾರ್ಯಕ್ರಮಗಳಲ್ಲಿ ಮೂರು ಮುಖ್ಯ ವಿಧಗಳಿವೆ. ಒಂದನೆಯದು ಜೈಲು ಆಧಾರಿತ ಪುನರ್ವಸತಿ ಕಾರ್ಯಕ್ರಮಗಳು, ಎರಡನೆಯದು ಬಿಡುಗಡೆಯ ನಂತರದ ಮರುಸಂಘಟನೆ ಮತ್ತು ನಂತರದ ಆರೈಕೆ ಕಾರ್ಯಕ್ರಮಗಳು ಹಾಗೂ ಕೊನೆಯದು ಸಮುದಾಯ ಆಧಾರಿತ ಪುನರ್ವಸತಿ ಕಾರ್ಯಕ್ರಮಗಳು. ಅಪರಾಧಿಯೊಬ್ಬ ಅಪರಾಧ ನಡವಳಿಕೆಗೆ ಮರುಕಳಿಸುವುದನ್ನು ತಪ್ಪಿಸಲು ಈ ಮೂರು ವಿಧದ ಸಾಮಾಜಿಕ ಮರು ಸಂಘಟನೆಯ ಕಾರ್ಯಕ್ರಮಗಳು ಮಹತ್ವದ ಪಾತ್ರ ನಿರ್ವಹಿಸುತ್ತವೆ. ಪ್ರತಿಯೊಂದು ಹಂತದ ಪುನರ್ವಸತಿ ಕಾರ್ಯಕ್ರಮಗಳ ರೂಪುರೇಷೆ, ಅನ್ವಯಿಕೆ, ಮೇಲ್ವಿಚಾರಣೆ, ಮೌಲ್ಯಮಾಪನ ಮತ್ತು ಅನುಸರಣೆ ಸಮಾಜಕಾರ್ಯಕರ್ತರ ಜವಾಬ್ದಾರಿಯಾಗಿರುತ್ತದೆ. ಶಾಸನಬದ್ಧ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಸಹಭಾಗಿತ್ವದಲ್ಲಿ ಅಪರಾಧಿಗಳು, ಅವರ ಕುಟುಂಬ, ಸಮುದಾಯ ಮತ್ತು ಕಾರಾಗೃಹ ಆಡಳಿತದ ನಿರೀಕ್ಷೆಗಳಿಗೆ ಅನುಗುಣವಾಗಿ ಪುನರಾವರ್ತನೆ ಅಥವಾ ಮರು ಅಪರಾಧವನ್ನು ಗಮನಾರ್ಹವಾಗಿ ಕಡಿಮೆಗೊಳಿಸುವ ಪ್ರಯತ್ನಕ್ಕೆ ಸಮಾಜಕಾರ್ಯ ಒತ್ತು ನೀಡುತ್ತದೆ.

**ಪರಾಮರ್ಶನ ಗ್ರಂಥಗಳು**


- Andersen, S. N., & Skardhamar, T. (2017). Pick a number: Mapping recidivism measures and their consequences. *Crime and Delinquency, 63*(5), 613–635. https://doi.org/10.1177/0011128715594942
- Behan, C. (2014). Learning to escape: Prison education, rehabilitation, and the potential for transformation. *Journal of Prison Education and Re-entry, 1*(1), 20. https://doi.org/10.15845/jper.v1i1.594
- Bonta, J., Law, M., & Hanson, K. (1998). The prediction of criminal

and violent recidivism among mentally disordered offenders: A meta-analysis. *Psychological Bulletin, 123*(2), 123. https://doi.org/10.1037/0033-2909.123.2.123

- Burke, L. O., & Vivian, J. E. (2001). The effect of college programming on recidivism rates at the Hampden County house of correction: A 5-year study. *Journal of Correctional Education, 52*(4), 160–162. http://www.jstor.org/stable/23292189
- Hall, L. L. (2015). Correctional education and recidivism: Toward a tool for reduction. *Journal of Correctional Education, 66*(2), 4–29.
- Hunt, K. S., Iaconetti, M., & Maass, K. (2019). Recidivism among federal violent offenders. *Working Paper*. United States Sentencing Commission.
- Kirk, D. S. (2009). A natural experiment on residential change and recidivism: Lessons from Hurricane Katrina. *American Sociological Review, 74*(3), 484–505. https://doi.org/10.1177/000312240907400308
- Ministry of Justice. (2012). *Compendium of reoffending statistics and analysis*. Ministry of Justice. https://www.gov.uk/government/publications/compendium-of-reoffending-statistics-and-analysis
- Nagin, D., Cullen, F., & Jonson, C. (2009). Imprisonment and reoffending. *Crime and Justice, 38*(1), 115–200. https://doi.org/10.1086/599202
- National Crime Records Bureau. (2020). *Crime in India 2020*. NCRB.